ಬಂದ ಸುಸ್ವರ. ಮಗನ ಮುದ್ದು ಮುಖ ಕಂಡರೂ ಅವಳ ಚಿಂತೆಯ ಗೆರೆ ಮುಖದಿಂದ ಎದ್ದು ಹೋಗಲಿಲ್ಲ. ಅವನ ತಾಟಿಗೆ ಅಕ್ಕಿ ರೊಟ್ಟಿ, ಕೆಸುವಿನ ಪಲ್ಯ, ಖಾರದ ಕೆಂಪು ಚಟ್ನಿ, ಚಳ್ಳೆಕಾಯಿ ಉಪ್ಪಿನಕಾಯಿ ಕೊನೆಗೆ ಘಮಘಮಿಸುವ ಹಸುವಿನ ತುಪ್ಪ ಬಡಿಸಿದಳು. ಸುಸ್ವರ ಒಳ್ಳೆಯ ಮಗುವಿನಂತೆ ಉಂಡು ಮುಗಿಸಿದ. ಒಳ್ಳೆಯ ಮಗುವೇ ಅದು. ಯಾವುದಕ್ಕೂ ಸುಖಾ ಸುಮ್ಮನೆ ಕಾಡಿದ್ದಲ್ಲ, ಬೇಡಿದ್ದಲ್ಲ. ಕೊಡಿಸಿದ್ದರಲ್ಲೇ ಅಚ್ಚುಕಟ್ಟಾಗಿ ಬೆಳೆದ ಮಗುವದು. 'ಇನ್ನೊಂದು ತುಂಡು ರೊಟ್ಟಿ ಹಾಕ್ಲೇನೋ...' ಅಂತ ಕೇಳಿದ್ದಕ್ಕೆ, 'ಉಹ್ಞೂ..' ಎನ್ನುತ್ತಲೇ ತಟ್ಟೆ ಎತ್ತಿಕೊಂಡು ಹಿತ್ತಲಿಗೆ ನಡೆದ. 'ಸ್ವರಾ ಮಳಿ ಜೋರೈತಿ... ತಾಟ್ ಅಲ್ಲೆ ಇಟ್ಟು ಬೇಗ ಬಾ ಒಳಗೆ...' ಕೂಗಿದಳು. 'ಹೂ...' ಅಂತಷ್ಟೇ ಅಂದರೂ ಅಮ್ಮ ನೆನಪಿಸಿಕೊಟ್ಟಂತಾಗಿ ಮಳೆಯಲ್ಲಿ ನೆನೆಯುವ ಹುಕಿ ಹುಟ್ಟಿತು ಅವನಿಗೆ. 'ಅಮ್ಮಾ... ಇಲ್ಲೇ ಗಣೇಶಣ್ಣಯ್ಯ ನಿಂತಾನೆ ಛತ್ರಿ ಹಿಡ್ಕೊಂಡು... ಅವನ್ ಜೊತೆ ಹೋಗಿ ಆಡ್ಕೊತೀನಿ...' ಅನ್ನುತ್ತಾ ಓಡಿದ ಸ್ವರ. ಪ್ರತಿಭಾ ಬಾಗಿಲ ಹತ್ತಿರ ಬರುವ ಹೊತ್ತಿಗೆ ಅವ ಮಾಯವಾಗಿದ್ದ. ಹಿತ್ತಿಲ ಬಾಗಿಲಿಗೆ ಬಂದು ಬಗ್ಗಿ, 'ಸ್ವರಾ ಸ್ವರಾ...' ಎಂದು ಕೂಗು ಹಾಕಿದಳು ಪ್ರತಿಮಾ. ಅವ, 'ಹ್ಞೂ... ಹ್ಞಾ...' ಅಂತಲೂ ಅನ್ನಲಿಲ್ಲ. ಇದು ಅವನ ನಿತ್ಯದ ಉಪಟಳವಾದ್ದರಿಂದ ಪ್ರತಿಮಾ ಸುಮ್ಮನಾದಳು. ಒಳ ಬಂದು ರಾಜಕ್ಕಾ, 'ತಾಟ್ ಇಡ್ಲ್ಯಾ ಇಬ್ರಿಗೂ...' ಎಂದು ಕೇಳಿದಳು. ಇಬ್ಬರೂ ಊಟದ ಶಾಸ್ತ್ರಕ್ಕೆ ಅಣಿಯಾದರು. ಊರೆಂಬೊ ಊರಲ್ಲಿ ಬೆಳೆದ ಎಲ್ಲ ಅಣ್ಣತಮ್ಮಂದಿರೂ ಬೆಳೆಯುತ್ತಾ ಬೆಳೆಯುತ್ತಾ ದಾಯಾದಿಗಳಾಗಿ ಮನೆ ತೊರೆದು ಸೋ ಕಾಲ್ಡ್ ನ್ಯೂಕ್ಲಿಯರ್ ಫ್ಯಾಮಿಲಿ ಕಟ್ಟಿಕೊಳ್ಳುತ್ತಿರುವಾಗ ಈ ಮನೆಯ ಅಣ್ಣ ತಮ್ಮಂದಿರು ಮಾತ್ರ ಒಟ್ಟಾಗಿ ಒಂದೇ ಮನೆಯಲ್ಲಿ ಕೂಡಿ ಬದುಕಲು ಸಾಧ್ಯವಾಗಿತ್ತು ಎಂದರೆ ಅದು ಈ ಸ್ವಂತ ಅಕ್ಕತಂಗಿಯರಂತೆ ಬದುಕುತ್ತಿದ್ದ ವಾರಗಿತ್ತಿಯರ ಕಾರಣದಿಂದಾಗಿ ಮಾತ್ರ. ಇಲ್ಲವಾಗಿದ್ದರೆ ಎಂದೋ ಈ ಮನೆಯ ನಡುಮನೆಗೆ ಅಡ್ಡಗೋಡೆಯೊಂದು ಬಿದ್ದಿರುತ್ತಿತ್ತೆಂದು ಕಾಣುತ್ತದೆ.

ಗಂಡಸರು ಮನೆಯ ಅಧಿಕೃತ ಯಜಮಾನರಾಗಿರುತ್ತಾರಾದರೂ ಮನೆ ಎಂಬುದು ಉಳಿಯುವುದು ನಡೆಯುವುದು ಮನೆಯ ಯಜಮಾನ್ತಿಯರಿಂದಲೇ ಎಂದು ಎಲ್ಲರಿಗೂ ತಿಳಿದಿರುವ ವಿಷಯವೇ. ರಾಜಿಯಷ್ಟು ತಾಳ್ಮೆ, ಸಮಾಧಾನ ಇಲ್ಲದೆ ಹೋದರೂ, ಪ್ರತಿಮಾ ಅಕ್ಕನ ಮಾತಿಗೆ ಎದಿರಾಡುವವಳಲ್ಲ. ತಂಗಿ ಏನಕ್ಕಾದರೂ ಆಸೆ ಪಟ್ಟರೆ ಈ ಅಕ್ಕ ನಡೆಸಿಕೊಡದಿರುವವಳೂ ಅಲ್ಲ. ಒಂದು ಹೊಟ್ಟೆಯಲ್ಲಿ ಹುಟ್ಟಿರಲಿಲ್ಲವಷ್ಟೇ. ಅವರ ಅನ್ಯೋನ್ಯತೆ ಕಂಡವರು ಮಾತ್ರ ಅವರನ್ನು ಸ್ವಂತ ಅಕ್ಕ ತಂಗಿಯರೆಂದೇ ಭಾವಿಸುತ್ತಾರೆ.

ಪ್ರತಿಮಾ ಉಂಡ ತಟ್ಟೆಗಳನ್ನು ಒಯ್ದು ಬೆಳಗಿಟ್ಟಳು. ರಾಜಿ ಅಡುಗೆ ಮನೆಯನ್ನು ಒರೆಸಿದಳು. ನಂತರ ಇಬ್ಬರೂ ಕೋಳಿ ನಿದ್ದೆಗೆಂದು ಹೊರಟರು. ಮಳೆ ನಿಂತಿರಲಿಲ್ಲ. ಬಾನಿಗೆ ತೂತು ಬಿದ್ದಂತೆ, ಸುರಿಯುತ್ತಲೇ ಇತ್ತು. ಮನೆ ತುಂಬ ಮೋಡ ಕವಿದ ವಾತಾವರಣ ಮಳೆಯೊಂದನ್ನು ಬಿಟ್ಟು. ಹಾಸಿಗೆಯ ಮೇಲೆ ಉರುಳಿದ ಪ್ರತಿಮಾ, ಶೂನ್ಯದಲ್ಲಿ ದೃಷ್ಟಿ ನೆಟ್ಟು ಚಿಂತಿಸತೊಡಗಿದಳು. ನಡುಹಗಲನ್ನು ಕವಿದ ಕತ್ತಲೆಯ ಮಬ್ಬಿನಲ್ಲಿ ಅವಳ ಯೋಚನೆಗಳು ಆರ್ದ್ರವಾಗತೊಡಗಿದವು. ನೆನಪುಗಳ ಪುಸ್ತಕದ ಹಿಂಪುಟಗಳು ತೆರೆದುಕೊಳ್ಳುತ್ತಾ ಭಾವುಕ ಚಳುಕೊಂದು ಮೈಯೆಲ್ಲಾ ಹರಿದಾಡಿತು. ನವಿರಾಗಿ ದೇಹ ಕಂಪಿಸಿತು. ಅವಳ ಮಾಧವ ಅವಳನ್ನು ನೋಡಲು ಬಂದಾಗ ಅವಳಿಗಿನ್ನು ಹದಿನಾರು ತುಂಬಿ ಮೂರು ತಿಂಗಳಾಗಿತ್ತಷ್ಟೇ. ಮದುವೆಯಾಗಲು ಇಷ್ಟವಿಲ್ಲವೆಂದು ಎಷ್ಟೆಲ್ಲ ಹಟ ಮಾಡಿದರೂ ಅದು ಅಪ್ಪನ ನಿರ್ಧಾರದ ಮುಂದೆ ನಡೆದಿರಲಿಲ್ಲ. ಮುಂದೆ ಮಾಧವ ಹೆಣ್ಣು ನೋಡುವ ಶಾಸ್ತ್ರಕ್ಕೆಂದು ಬಂದಾಗ, ಅವನ ಮೈಕಟ್ಟು, ಕುಡಿನೋಟ, ಸುಂದರ ನಗುವಿಗೆ ಸೋತುಹೋಗಿದ್ದಳು. ನಂತರ ಯಾವ ತಕರಾರೂ ಇಲ್ಲದೆ ಮದುವೆ ಸಾಂಗೋಪಾಂಗವಾಗಿ ನಡೆದು ಪ್ರತಿಮಾ ಎನ್ನುವ ಪುಟ್ಟ ಪೋರಿ ಈ ಮನೆಯ ಕಿರಿ ಸೊಸೆಯಾಗಿ ಮನೆ ತುಂಬಿದ್ದಳು. ನಂತರ ರಾಜಿಯಂತಹ ಅಕ್ಕ ಜೊತೆಯಾದದ್ದರಿಂದಾಗಿ ಅವಳ ಬದುಕು ಗಂಡನ ಮನೆಯಲ್ಲಿ ಯಾವ ದೊಡ್ಡ ಅಲೆಗೂ ಸಿಕ್ಕದೆ ನೆಮ್ಮದಿಯಾಗೇ ಸಾಗಿತ್ತು. ಸುಸ್ವರನೂ ಮಡಿಲು

